


ಆಲೋಚನೆಯೇ ಎಲ್ಲರ ಮನಸಲ್ಲಿ ತುಂಬಿರುವ ಹಾಗಿದೆ. ಈ ಮನಸ್ಥಿತಿಯೇ ಎಲ್ಲರನ್ನೂ ಮುಳುಗಿಸುವ ಸಾಧ್ಯತೆಯೂ ಎದುರಿಗೇ ಇದೆ.

ಚಿತ್ರಮಂದಿರ ಪೂರ್ತಿ ತೆರೆದ ಘೋಷಣೆಯಾಗುತ್ತಲೇ ಮೊದಲು ಬಿಡುಗಡೆಯನ್ನು ಘೋಷಿಸಿದ್ದು ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿದ್ದ 'ಸಲಗ'. ಅ. 1ರಂದು ಅದು ಬಿಡುಗಡೆ ಆಗಬೇಕಿತ್ತು. ಅ. 14ಕ್ಕೆ ಸುದೀಪ್ ನಟನೆಯ 'ಕೋಟಿಗೊಬ್ಬ 3' ಬಿಡುಗಡೆ ಮಾಡುವ ಲೆಕ್ಕಾಚಾರವನ್ನು ಹಾಕಿಕೊಳ್ಳಲಾಗಿತ್ತು. ಅ. 29ಕ್ಕೆ ಶಿವಣ್ಣ ನಟನೆಯ 'ಭಜರಂಗಿ 2' ತೆರೆಗೆ ಬರಲು ಸಜ್ಜಾಗಿತ್ತು.

ಅ. 1ಅಂದರೆ ಪ್ರಚಾರಕ್ಕೆ ಸಾಕಷ್ಟು ಸಮಯ ಸಿಗುವುದಿಲ್ಲ ಎಂಬ ಕಾರಣಕ್ಕೆ 'ಸಲಗ'ದ ಬಿಡುಗಡೆಯನ್ನು ಅ. 14ಕ್ಕೆ ಮುಂದೂಡಲಾಯಿತು. ಆ ದಿನಾಂಕಕ್ಕೆ ಬಿಡುಗಡೆಯಾಗಬೇಕಿದ್ದ 'ಕೋಟಿಗೊಬ್ಬ 3' ಸಿನಿಮಾದ ನಿರ್ಮಾಪಕ ಸೂರಪ್ಪ ಬಾಬುವೇನೋ ತಮ್ಮ ಚಿತ್ರವನ್ನು ಮತ್ತೆರಡು ವಾರ ಮುಂದಕ್ಕೆ ಹಾಕಲು ಸಿದ್ಧರಿದ್ದರು. ಆದರೆ ಅ. 29ರಂದು ತಮ್ಮ ನಿರ್ಮಾಣದ 'ಭಜರಂಗಿ 2' ಸಿನಿಮಾ ಬಿಡುಗಡೆ ಮಾಡಲು ಸಜ್ಜಾಗಿದ್ದ ಜಯಣ್ಣ ಹಿಂದಕ್ಕೆ ಸರಿಯಲು ಸಿದ್ಧರಿಲ್ಲ. ಹಾಗಾಗಿ ಈಗ ಅ. 14ಕ್ಕೇ 'ಸಲಗ' ಮತ್ತು 'ಕೋಟಿಗೊಬ್ಬ 3' ಬಿಡುಗಡೆಯಾಗಲಿದೆ.

ಎರಡು ಸ್ಟಾರ್ ನಟರ ಸಿನಿಮಾ ಒಂದೇ ದಿನ ಬಿಡುಗಡೆಯಾಗುತ್ತಿರುವುದು ಸ್ಟಾರ್ ವಾರ್‌ಗೆ ಕಾರಣವಾಗುತ್ತದೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಕನ್ನಡದಲ್ಲಿ, ಡಬ್ಬದಲ್ಲಿ ಕೂತಿರುವ ಸಿನಿಮಾಗಳು ಗಣನೆಗೆ ನಿಲುಕದಷ್ಟಿವೆ. ಅವುಗಳೆಲ್ಲವೂ ಬಿಡುಗಡೆಯಾಗಿ, ಬಂಡವಾಳವನ್ನು ಸುರಕ್ಷಿತ ದಡ ತಲುಪಿಕೊಳ್ಳುವುದು ಕನಸೇ ಎಂಬ ಪರಿಸ್ಥಿತಿ ಇದೆ. ಚಿತ್ರರಂಗದ ಚೇತರಿಕೆ ಕಾಣುತ್ತದೆಯೋ ಅಥವಾ ಇನ್ನಷ್ಟು ಅಧಃಪತನಗೊಳ್ಳುತ್ತದೆಯೋ ಎಂಬುದು ಅಕ್ಟೋಬರ್ ತಿಂಗಳಲ್ಲಿಯೇ ನಿರ್ಧಾರವಾಗುತ್ತದೆ. ಸ್ಟಾರ್ ಸಿನಿಮಾಗಳು ಜನರನ್ನು ಚಿತ್ರಮಂದಿರಗಳಿಗೆ ಕರೆತರಲು ಯಶಸ್ವಿಯಾದರೆ ಉಳಿದ ಸಿನಿಮಾಗಳೂ ನಿರಾಳವಾಗಬಹುದು. ಇಲ್ಲವಾದರೆ ಡಬ್ಬದೊಳಗಿನ ಸಿನಿಮಾಗಳು ಬಹುತೇಕ ಅಲ್ಲಿಯೇ ಅಸುನೀಗಿದರೂ ಅಚ್ಚರಿಯಿಲ್ಲ. ಹಾಗಾಗಿ ಈ ವರ್ಷದ ನ.1ರ ಕನ್ನಡ ಹಬ್ಬದ ಹೊತ್ತಿಗೆ ಕನ್ನಡ ಚಿತ್ರರಂಗದಲ್ಲಿಯೂ ಹಬ್ಬದ ವಾತಾವರಣವಿರುತ್ತದೆಯೋ ಸ್ಮಶಾನ ಮೌನವಿರುತ್ತದೆಯೋ ಎಂಬುದನ್ನು ಪ್ರೇಕ್ಷಕರೇ ನಿರ್ಧರಿಸಲಿದ್ದಾರೆ. ■



# 'ಕಾಡ'ದಲ್ಲಿ ಕಾವ್ಯಾ!

ಕಾವ್ಯಾ ಶೆಟ್ಟಿ ಅವರಿಗೆ ಲಾಕ್‌ಡೌನ್ ನಂತರದ ಕಾಲ ಅವಕಾಶದ ಸುಗ್ಗಿಯಾಗಿ ಒದಗಿಬಂದಿದೆ. ಅವರ ಕೈಯಲ್ಲಿ ಹಲವು ಸಿನಿಮಾಗಳಿದ್ದು, 'ಲವ್ ಮಾಕ್ಟೇಲ್' ಸಿನಿಮಾದ ತೆಲುಗು ಅವತರಣಿಕೆಯಲ್ಲಿಯೂ ನಟಿಸುತ್ತಿದ್ದಾರೆ. ಸದ್ಯಕ್ಕೆ ಅವರು ವೃಷಾಂಕ್ ನಾಯ್ಕ ಅವರ ನಿರ್ದೇಶನದ 'ಕಾಡ' ಸಿನಿಮಾದಲ್ಲಿ ಬ್ಯುಸಿಯಾಗಿದ್ದಾರೆ.

ಕಾಡ ಒಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಅವರು ಕಾವ್ಯಾ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಈ ಚಿತ್ರದಲ್ಲಿ ಜೆ.ಕೆ. ನಾಯಕ. ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಜೆ.ಕೆ. ಅವರೇ ಕಾವ್ಯಾ ಜೊತೆಗಿರುವ ಚಿತ್ರವನ್ನು ಹಂಚಿಕೊಂಡಿದ್ದರು.

ಈ ಚಿತ್ರದ ಪಾತ್ರವನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಎಂಬ ಕುರಿತು ಕಾವ್ಯಾ ಅವರಿಗೆ ಕುತೂಹಲ ಮತ್ತು ನಿರೀಕ್ಷೆ ಎರಡೂ ಇದೆ. ಅಚ್ಯುತ್‌ಕುಮಾರ್ ಮತ್ತು ಉಗ್ರಂ ಮಂಜು ಅವರೂ ಮುಖ್ಯಪಾತ್ರಗಳಲ್ಲಿ ನಟಿಸಿರುವ ಈ ಸಿನಿಮಾದಲ್ಲಿ ಕಾವ್ಯಾ ಅವರು ಎರಡು ಛಾಯೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತೆ.

ಈಗಾಗಲೇ ಚಿತ್ರದ ಚಿತ್ರೀಕರಣ ಜೋರಾಗಿಯೇ ನಡೆಯುತ್ತಿದೆ. ಮೊದಲ ಶೆಡ್ಯೂಲ್ ಬೇಲೂರಿನ ಸಮೀಪ ಚಿತ್ರೀಕರಣಗೊಂಡಿದೆ. ಈ ಸಿನಿಮಾದಲ್ಲಿ ಪ್ರೇಕ್ಷಕರಿಗೆ ಹಲವು ಅಚ್ಚರಿಗಳಿವೆ. ತೀರಾ ಹೊಸತೆನಿಸುವ ರೀತಿಯ ಕಥೆ ಮತ್ತು ನಿರೂಪಣೆ ಇಲ್ಲಿದೆ. ಹಾಗಾಗಿಯೇ ನಾನು ಖುಷಿಯಿಂದ ಒಪ್ಪಿಕೊಂಡು ನಟಿಸುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾರೆ ಅವರು.

ಇತ್ತೀಚೆಗೆ ಬಿಡುಗಡೆಯಾದ 'ಲಂಕೆ' ಸಿನಿಮಾದಲ್ಲಿ ಕಾವ್ಯಾ ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಂಡಿದ್ದರು. 'ಕಾಡ' ಸಿನಿಮಾದಲ್ಲಿಯೂ ಅಂಥದ್ದೇ ಪಾತ್ರದಲ್ಲಿ ನಟಿಸುತ್ತಿದ್ದಾರಾ ಎಂಬ ಅನುಮಾನದ ಪ್ರಶ್ನೆಗೆ ಅವರಂತೂ ಗುಟ್ಟು ಬಿಟ್ಟುಕೊಡದೆ ಸುಮ್ಮನೆ ನಗುತ್ತಾರೆ. ■

